C.R.P.67

Form No.4 (Civil)
Deposition Sheets
(R.P.No.57)

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಮಂಡ್ಯ

ಎಸ್.ಸಿ. ನಂ.115/2021

ದಿನಾಂಕಃ 16.11.2022 ರಂದು ಪ್ರಮಾಣ ವಚನ ಬೋದಿಸಲಾಗಿದೆ

ಸಿ. ಡಬ್ಲ್ಯೂ:5 ಪಿ. ಡಬ್ಲ್ಯೂ:5

| | |
|---|---|
| ಸಾಕ್ಷಿದಾರರ ಹೆಸರು | ಮಧು ಎಸ್ |
| ತಂದೆಯ ಹೆಸರು | ಶಂಕರ್ |
| ವಯಸ್ಸು | 29 ವರ್ಷ |
| ಉದ್ಯೋಗ | ಚಾಲಕ |
| ವಾಸ | ಕೃಷ್ಣಾ ಪುರ |

ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ

ನನಗೆ ತೋರಿಸಿದ ನಿಪಿ.3 ಮಹಜರ್ ನಲ್ಲಿ ನನ್ನ ರುಜು ಇರುತ್ತದೆ. ಸಾಕ್ಷಿಯ ರುಜುವನ್ನು ನಿಪಿ.3(ಸಿ) ಎಂದು ಗುರುತಿಸಲಾಯಿತು. ಚಾಸಾ.2 ವಾಸವಾಗಿದ್ದ ಬಾಡಿಗೆ ಮನೆಯ ಹತ್ತಿರ ಪೊಲೀಸರು ಮಹಜರ್ ಮಾಡಲು ಬಂದ ಕಾಲದಲ್ಲಿ ಸಹಿ ಮಾಡಿರುತ್ತೇನೆ. ಆಗ ಸಮಯ ಬೆಳಗ್ಗೆ 11.00 ಗಂಟೆಯಾಗಿತ್ತು. ಹಿಂದಿನ ದಿವಸ ರಾತ್ರಿ 10.00 ಗಂಟೆ ಸಮಯದಲ್ಲಿ ಚಾಸಾ.2 ರವರ ಬಲಗೈಗೆ ಕಾಯಿ ಕೀಳುವ ಕುಡುಗೋಲಿನಿಂದ ಚಾಸಾ.2 ರವರ ಅಣ್ಣನ ಮಗ ದಿಲೀಪ ಹಲ್ಲೆ ಮಾಡಿದ್ದರಿಂದ ಮಹಜರ್ ನಡೆಸಲು ಪೊಲೀಸರು ಬಂದಿದ್ದರು. ಮಹಜರ್ ಕಾಲದಲ್ಲಿ ಪೊಲೀಸರು, ಊರಿನ ಜನರು , ಅಕ್ಕಪಕ್ಕದವರು, ನಾನು ಹಾಜರಿದ್ದೆವು. ಹಿಂದಿನ ದಿವಸ ರಾತ್ರಿ ಘಟನೆ ನಡೆದ ಸ್ಥಳದಲ್ಲಿ ಜವಳಿ ಕುಡುಗೋಲು, ಟೀ ಶರ್ಟ್, ಚಡ್ಡಿ, ರಕ್ತಸಿಕ್ತ ಮಣ್ಣು, ಸಾದಾ ಮಣ್ಣು ,ಒಟ್ಟು 5 ಪದಾರ್ಥಗಳನ್ನು ಪೊಲೀಸರು ತೆಗೆದುಕೂಂಡರು. ಸದರಿ ವಸ್ತುಗಳು ಚಾಸಾ.2 ರವರ ಮನೆಯ ಹತ್ತಿರ ಇತ್ತು. ಮಹಜರ್ ಸಮಯದಲ್ಲಿ ಚಾಸಾ.4 ಶರತ್ ಇದ್ದರು, ಊರಿನ ಜನರು ಇದ್ದರು. ಟೀ ಶರ್ಟ್ ಮತ್ತು ಬರ್ ಮೋಡಾ ಚಡ್ಡಿ ಚಾಸಾ.2 ರವರದಾಗಿತ್ತು. ಚಾಸಾ.1 ರವರು ಆಸ್ಪತ್ರೆಯಿಂದ ರಕ್ತಸಿಕ್ತವಾಗಿದ್ದ ಚಾಸಾ.2 ರವರ ಶರ್ಟ್ ಮತ್ತು ಬರ್ ಮೋಡಾ ಚಡ್ಡಿ ಯನ್ನು ತಂದು ಚಾಸಾ.2 ಸತೀಶ್ ರವರ ಮನೆ ಹತ್ತಿರ ಇಟ್ಟಿದ್ದರು. ಈ 5 ಪದಾರ್ಥಗಳನ್ನು ನೋಡಿದರೆ ಗುರುತಿಸುತ್ತೇನೆ.

ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಮು.ಮಾ.1 ರಿಂದ 5 ನ್ನು ನೋಡಿ ಗುರುತಿಸಿದ್ದಾರೆ. ಮು.ಮಾ.1 ರಿಂದ 5 ರ ಮೇಲೆ ಅಂಟಿಸಿರುವ ಚೀಟಿಯಲ್ಲಿ ಇರುವ ಅವರ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಮು.ಮಾ.1(ಬಿ) ರಿಂದ ಮು.ಮಾ.5(ಬಿ) ಎಂದು ಗುರುತಿಸಲಾಯಿತು. ನಿಪಿ.11 ಪೊಲೀಸ್ ನೋಟೀಸ್ ನಲ್ಲಿ ನನ್ನ ರುಜು ಇರುತ್ತದೆ. ಇದನ್ನು ನಿಪಿ.11(ಬಿ) ಎಂದು ಗುರುತಿಸಲಾಯಿತು. ಪೊಲೀಸರು ಮಹಜರ್ ಮಾಡಿದ ಸ್ಥಳದ ಪಕ್ಕದಲ್ಲಿ ಖಾಲಿ ಜಾಗ ಇದೆ, ಇನ್ನೊಂದು ಕಡೆ ಚಾಸಾ.1 ಬೋರೆಗೌಡರ ಮನೆ ಇದೆ, ಹಿಂದೆ ಜಮೀನು ಇದೆ, ಚಾಸಾ.2 ವಾಸ ಮಾಡುತ್ತಿದ್ದ ಮನೆಯ ಪಕ್ಕದಲ್ಲಿ ನಮ್ಮ ಮನೆ ಇದೆ.

<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಎನ್.ಎನ್. ವಕೀಲರಿಂದಃ</u>

ನನಗೆ ಓದಲು ಮತ್ತು ಬರೆಯಲು ಬರುವುದಿಲ್ಲ. ಸಹಿ ಮಾಡುತ್ತೇನೆ, ಸ್ವಲ್ಪ ಕನ್ನಡ ಓದುತ್ತೇನೆ. 7 ನೇ ಕ್ಲಾಸ್ ವರೆಗೆ ಓದಿದ್ದೇನೆ. ಪೊಲೀಸರು ಹಲ್ಲೆ ನಡೆದ ಮರುದಿವಸ ಮಹಜರ್ ಮಾಡುವ ದಿನ ಬೆಳಗ್ಗೆ ಬಂದಿದ್ದರು, ಆಗ ಪೊಲೀಸ್ ನೋಟೀಸನ್ನು ಕೊಟ್ಟಿದ್ದರು. ನಿಪಿ.11 ರಲ್ಲಿ ಪೊಲೀಸರು ನೋಟೀಸನ್ನು ನೀಡಿದ ದಿನಾಂಕ ಮತ್ತು ಸಮಯ ಇಲ್ಲ. ಪೊಲೀಸರು ಮಹಜರ್ ನಡೆಸಿದ ದಿನಾಂಕ , ತಿಂಗಳು ಮತ್ತು ವರ್ಷವನ್ನು ನಿಖರವಾಗಿ ಹೇಳಲು ಆಗುವುದಿಲ್ಲ. ನಾನು ಮಹಜರ್ ಸ್ಥಳಕ್ಕೆ ಮೊದಲು ಹೋಗಿದ್ದೆ. ಮಹಜರ್ ಸ್ಥಳವನ್ನು ಪೊಲೀಸರಿಗೆ ಯಾರು ತೋರಿಸಿದರು ಅಂತ ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಸ್ವತಃ ಹೇಳುತ್ತಾರೆ ಚಾಸಾ.1 ಬೋರೆಗೌಡರು ತೋರಿಸಿದರು. ಮಹಜರ್ ಕಾಲದಲ್ಲಿ ನಾನು , ಚಾಸಾ.1, ಚಾಸಾ.4 , ಊರಿನ ಜನರು ಹಾಜರಿದ್ದೆವು. 15 ರಿಂದ 20 ಊರಿನ ಜನರು ಸೇರಿದ್ದರು. ನಿಪಿ.3 ಮಹಜರ್ ನಲ್ಲಿ ಬರೆದಿರುವ ಒಕ್ಕಣೆ ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ನಿಪಿ.3 ಮಹಜರ್ ಒಕ್ಕಣೆಯನ್ನು ಬರೆದಿದ್ದ ಪೊಲೀಸರ ಹೆಸರು ನನಗೆ ಗೊತ್ತಿಲ್ಲ. ಚಾಸಾ.2 ರವರ ಮನೆಯ ಅಕ್ಕಪಕ್ಕದಲ್ಲಿ ನನ್ನ ಮನೆ, ಚಾಸಾ.4 ಶರತ್ ಮತ್ತು ಚಾಸಾ.1 ರವರ ಮನೆ ಇದೆ. ಬೇರೆಯವರ ಮನೆಗಳು ಇಲ್ಲ. ಚಾಸಾ.2 ರವರ ಮನೆಯಿಂದ 20X30 ಅಡಿ ನಿವೇಶನವನ್ನು ಬಿಟ್ಟು ನಂತರ ಚಾಸಾ.1 ರವರ ಮನೆ ಇದೆ. ಚಾಸಾ.2 ರವರ ಮನೆಯಿಂದ 3 ಅಡಿ ಅಂತರದಲ್ಲಿ ನಮ್ಮ ಮನೆ ಇದೆ. ನಮ್ಮ ಮನೆಯಿಂದ 3 ಅಡಿ ಅಂತರದಲ್ಲಿ ಚಾಸಾ.4 ರವರ ಮನೆ ಇದೆ. ನಾನು ಚಾಸಾ.2 ರವರ ಮನೆಯ ಪಕ್ಕದಲ್ಲಿ ಇರುವ ಮನೆಯಲ್ಲಿ ವಾಸ ಮಾಡುತ್ತಿದ್ದೇನೆ. ಚಾಸಾ.4 ನಮ್ಮ ಮನೆಯ ಪಕ್ಕದಲ್ಲಿ ವಾಸ ಮಾಡುತ್ತಿದ್ದಾರೆ ಎಂದರೆ ಸರಿ. ಚಾಸಾ.1 ಬೋರೆಗೌಡರ ಮನೆಯ ಪೂರ್ವಕ್ಕೆ ರಸ್ತೆ ಇದೆ, ಪಶ್ಚಿಮಕ್ಕೆ ಜಮೀನು, ಉತ್ತರಕ್ಕೆ ಜಮೀನು ಇದೆ, ದಕ್ಷಿಣಕ್ಕೆ ನನ್ನ ಮತ್ತು ಚಾಸಾ.4 ಶರತ್ ರವರ ಮನೆ ಇದೆ.

ಪೊಲೀಸರು ಮಹಜರ್ ಸ್ಥಳಕ್ಕೆ ಬಂದಿದ್ದಾಗ ಸುಮಾರು ಬೆಳಗ್ಗೆ 11.00 ರಿಂದ 11.30 ಗಂಟೆ ಸಮಯವಾಗಿತ್ತು. ಮಹಜರ್ ಮುಗಿದಾಗ ಮದ್ಯಾಹ್ನ 1.30 ಗಂಟೆ ಆಗಿತ್ತು . ನಿಪಿ.3 ಮಹಜರ್ ನಲ್ಲಿ ಕ್ರಮ ಸಂಖ್ಯೆ12 ರಲ್ಲಿ , ಸಮಯವನ್ನು 2.30 ಅಂತ ಇದ್ದುದನ್ನು 1.30 ಅಂತ ತಿದ್ದಿ ಬರೆದಿದ್ದಾರೆ ಎಂದರೆ ಸರಿಯಲ್ಲ. ಮುದ್ದೆಮಾಲುಗಳನ್ನು ನಾನು ಮತ್ತು ಚಾಸಾ.1 ರಿಂದ ಚಾಸಾ.3, ಪೂಲೀಸರೊಂದಿಗೆ ಶರೀಕಾಗಿ ಪ್ರಕರಣಕ್ಕೋಸ್ಕರ ಸೃಷ್ಟಿ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ನಿಪಿ.3 ಮಹಜರ್ ಗೆ ಠಾಣೆಯಲ್ಲಿ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಜವಳಿ ಕುಡುಗೋಲನ್ನು ಕಾಯಿ ಕೀಳುವುದಕ್ಕೆ ಬಳಸುತ್ತಾರೆ. ಕುಡುಗೋಲನ್ನು ಸೀಮೆ ಹುಲ್ಲು ಕುಯ್ಯುವುದಕ್ಕೆ, ಜೋಳದ ಕಡ್ಡಿ ಕತ್ತರಿಸುವುದಕ್ಕೆ ಬಳಸುತ್ತಾರೆ ಎಂದರೆ ಸರಿ. ಜವಳಿ ಕುಡುಗೋಲು ಬೇರೆ ಮತ್ತು ಕುಡುಗೋಲು (ಕುಡಲು) ಬೇರೆ ಎಂದರೆ ಸರಿ. ಮುದ್ದೆಮಾಲುಗಳನ್ನು ಪೊಲೀಸರು ವಶಪಡಿಸಿಕೊಂಡು ಪ್ಯಾಕ್ ಮಾಡಿದರು. ಮಹಜರನ್ನು ಪೊಲೀಸ್ ಠಾಣೆಯಲ್ಲಿ ಮಾಡಿದ್ದಾರೆ ಎಂದರೆ ಸರಿಯಲ್ಲ ಹಾಗೂ ಘಟನೆಯ ಸ್ಥಳದಲ್ಲಿ ಮಾಡಿಲ್ಲ ಎಂದರೆ ಸರಿಯಲ್ಲ. ನಿಪಿ.4 ರಿಂದ ನಿಪಿ.7 ಫೋಟೋಗಳನ್ನು ಪೊಲೀಸರು ತೆಗೆದಿದ್ದರು, ಅವರ ಹೆಸರು ಗೊತ್ತಿಲ್ಲ. ಈ ದಿವಸ ಕೋರ್ಟಿಗೆ ಸಾಕ್ಷಿ ಹೇಳಲು ನಾನು ಒಬ್ಬನೇ ಬಂದಿದ್ದೇನೆ. ಈ ದಿವಸ ಕೋರ್ಟಿಗೆ ಸಾಕ್ಷಿ ಹೇಳಲು ನಾನು, ಶರತ್, ನಾಗರಾಜು, ಲೋಕೇಶ, ನಾರಾಯಣ, ಶಂಕರೇಗೌಡ ಹಾಗೂ ಚಾಸಾ.2 ಮತ್ತು 3 ಒಟ್ಟಿಗೆ ಬಂದು ಸಾಕ್ಷಿ ಹೇಳಲು ನ್ಯಾಯಾಲಯದ ಹೊರಗಡೆ ಕುಳಿತಿದ್ದೆವು ಎಂದರೆ ಸರಿಯಲ್ಲ. ಉದ್ದೇಶಪೂರ್ವಕವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ.2 ಮತ್ತು 3 ರವರ ಚಾಡಿ ಮಾತನ್ನು ಕೇಳಿಕೊಂಡು ಆರೋಪಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪೊಲೀಸರು ನಮ್ಮ ಸಮಕ್ಷಮದಲ್ಲಿ ನಿಪಿ.3 ಮಹಜರನ್ನು ಮಾಡಿರಲಿಲ್ಲ ಹಾಗೂ ಸ್ಥ,ಳದಲ್ಲಿ ನಾನು ಸಹಿ ಮಾಡಿರಲಿಲ್ಲ ಎಂದರೆ ಸರಿಯಲ್ಲ. ಪೊಲೀಸರು ಮು.ಮಾ.1 ರಿಂದ 5 ಸ್ಥಳದಲ್ಲಿ ನನ್ನ ಮುಂದೆ ಜಪ್ತಿ ಮಾಡಿಕೊಂಡಿರಲಿಲ್ಲ ಎಂದರೆ ಸರಿಯಲ್ಲ.

<u>ಮರು ವಿಚಾರಣೆ:</u> ಏನು ಇಲ್ಲ

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಶೀಲ .ಎನ್)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.